UNIVERSAL LIBRARY
OU_200888
UNIVERSAL LIBRARY

# ಯುಗಾದಿ

ವಾಸುದೇವ

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ

ಬೆಲೆ ನಾಲ್ಕಾಣೆ

# ವಿಷಯಗಳು


| | ಪುಟ |
|---|---|
| ಪ್ರಾರ್ಥನೆ | ೫ |
| ಯುಗಾದಿ | ೭ |
| ಕನ್ನಡ ಭಾಷೆ | ೯ |
| ಮನಸು | ೧೦ |
| ಕೃಷಿ | ೧೧ |
| ಮಸಿ | ೧೪ |
| ಚೆನ್ನಕೇಶವ - ಸೋಮೇಶ್ವರ | ೧೭ |
| ಸತ್ಯನಾರಾಯಣ | ೧೯ |
| ನವಯುಗ | ೨೧ |
| ಕಣಿವೆ - ಕೆರೆ | ೨೨ |
| ಕರುಣಾ | ೨೩ |
| ಚಿತ್ರಗಾರ | ೨೪ |
| ಕನ್ನಡ ನಾಡಿನ ಸೊಬಗು | ೨೬ |
| ಹುಟ್ಟಿದ ನಾಡಿನ ನೆನಹು | ೨೭ |
| ಸರಸ್ವತಿಯ ಒಂದು ಚಿತ್ರ | ೨೮ |

## ಪ್ರಾರ್ಥನೆ

ಆವನತುಲ ಗುಣಾತಿಶಯ ಸಮೂಹವನು ಸಂ।
ಭಾವಿತರ್ ತಮತಮಗೆ ತೋರ್ದ ನಾನಾವಿಧದ।
ಭಾವನೆಗಳಿಂದಾವಗಂ ಹರುಷದಿಂ ಸ್ತುತಿಸಿ ಪೊಗಳಿ ಪಾಡುತಲಿರುವರೋ॥
ಜೀವಿಗಳ ಜೀವನವು ಸೇವೆ ಯಾವನದೆಂದು।
ಭಾವಿಪರೊ ತಪಸಿಗಳ್ ಸಕಲ ಲೋಕಾಧಾರ।
ದೇವನಾತಂ ತನ್ನ ಸೊಬಗು ಸುಗ್ಗಿಯ ಸುಳಿವನಾವಗಂ ತೋರಲೆಮಗೇ॥

# ಯುಗಾದಿ

ಎಲೆ ಯುಗಾದಿಯೆ ನೀಸದೇಸನೆ ।
ಒಲಿದು ತರುವೆಯೊ ನಿನ್ನೊಡನೆ ಪೇಳ್ ।
ಸಲಿಗೆ ಸಂತಸ ಸೊಬಗು ಸುವಿನಯ ಸೌಖ್ಯ ಸಾಹಸವೋ ? ॥
ಸುಲಭವಲ್ಲದೊಡಿವನು ಬಿಟ್ಟೊಡ ।
ಸುಳಿವ ಗರ್ವ ವಿಕಾರ ಚಿಂತನೆ ।
ಬಲಿತ ಬಿರುಸುಡಿ ದುಃಖ ಭೀತಿಗಳನ್ನು ತರುತಿಹೆಯೋ ? ॥

ಹಳೆಯ ವರುಷಂ ಪೋಪುದಕಟಾ ।
ಗಳಿಸಿಕೊಟ್ಟುದದೇನು ಭಾಗ್ಯವ ? ।
ನಲಿದು ಕೊಟ್ಟುದದೇನು ವರಗಳನೆಂದು ಕೇಳದಿರಿ ॥
ಬಲಿಯುಲಿಲ್ಲವೆ ಬೇಡವೆನಿಸುವ ।
ಚಲನೆ ವಲನೆಗಳೆಂದು ಕೋಪವ ।
ತಳೆದು ಕರೆದರೆ ಬರದ ಸಮಯವ ಬಯ್ದುಕೊಳ್ಳದಿರಿ ॥

ಹೊಸ ಯುಗಾದಿಯು ಬಂದುಬಿಟ್ಟುದು ।
ಯುಸಿರನೆಳೆದೆಲೆ ನಿಲ್ಲು ನಿಲ್ಲೆನೆ ।
ಹುಸಿಯೆ ಹೋಗುವಕಾಲ ನಿಲುವುದೆ ವಿಾರಿ ಗಡುವುಗಳ ? ॥
ಹೊಸದೆನಿಸಿಯೇ ಹಿಂದೆ ತಾಂ ಕಾ ।
ಣಿಸಿದುದಿಲ್ಲವೆ ? ಯೀಗ ತಾವ್ ಕೈ ।
ಹೊಸೆದುಕೊಂಡರೆ ವರುಷ ಕಾಲಂ ನಿಂದು ನೋಡುವುದೆ ? ॥

## ಯುಗಾದಿ

ಹಿಂದೆ ಶುಭ ಸಾಹಸಕೆ ಮಾರ್ಗವ ।
ಸಂದವಾಗಿಯೆ ತೋರಿಸಿದೆ ನಾ ।
ನಿಂದು ಪೋಪೆ ನವೀನ ಕಾಲಂ ಬಂದು ನಿಂದಿಹುದು ॥
ಚೆಂದದಿಂದಲೆ ಹರಸಿ ಹೋಗುವೆ ।
ಬಂದ ಸಮಯವ ಬಿಡದೆ ನಡೆವರ ।
ನೆಂದು ಹೊರಟೇಹೋಯ್ತು ಮುಪ್ಪಿನ ವರುಷ ಮರೆಯಾಗೀ ॥

ಎಲೆ ಸಮಯ ನೀಂ ಪೇಳ್ದ ನೀತಿಯು ।
ಕಲಿಸಿಕೊಟ್ಟಾ ಯೋಗ್ಯ ಕಲೆಗಳ ।
ನೊಲಿದು ಗಂಭೀರದಲಿ ತೋರಿದ ಧರ್ಮಮಾರ್ಗವನು ॥
ಅಳಿಸದಿರಿಸುವೆವೆಮ್ಮ ಮನದೊಳ್ ।
ಕಳೆದುಕೊಂಡೆವು ನಿನ್ನ ನಿನ್ನೇ ।
ನುಳಿದುದಕಟಾ ನಿನ್ನ ಧ್ಯಾನವೆ ಲಭ್ಯಮಲ್ಲದೊಡೆ? ॥

ಬಾ ಯುಗಾದಿಯೆ ನಿನ್ನೊಡನೆ ಬರು ।
ವಾ ಯುಗಕೆ ಬೇಕೆನಿಪ ನೂತನ ।
ಧ್ಯೇಯ ಸಾಹಸ ಯುಕ್ತಿ ನಡತೆಗಳೆಮ್ಮೊಳಿರುತಿಹವು ॥
ಮಾಯೆ ಮುನಿಸಿಗೆ ಸೋಲ್ವರಲ್ಲಾ ।
ಕಾಯುತಿಹನೆಮ್ಮೊಡನೆ ಶ್ರೀ ಹರಿ ।
ನೋಯದಿರುವುದು ನೀನಯೋಗ್ಯರ ಕಂಡೆನೆಂದೆನುತ ॥

# ಕನ್ನಡ ಭಾಷೆ

ಉಪ್ಪು ಸಾಲದ ಪಾಕದಂದದಿ ।
ಸಪ್ಪೆಯಾಗಿಹ ಭಾಷೆ ಸಮ್ಕೃತ ।
ಮುಪ್ಪ ತೆರವೇನೆಂದು ಚಿಂತಿಸಿ ಚಿತ್ತವಿಭ್ರಮದೆ ॥
ತಪ್ಪನೆಣಿಸುತೆ ಬೈದು ಭಂಗಿಸಿ ।
ಒಪ್ಪವಿಲ್ಲದ ಭಾಷೆಯಿದನಾ ।
ವೊಪ್ಪವೆಂದಾದರಿಸಿ ನೋಡದೆ ಬಿಡುವುದನುಚಿತವು ॥

ಸಾರ ಸರಳತೆ ಸೊಬಗಿನಿಂ ವಿ ।
ಸ್ತಾರವಾಗಿಹ ಭಾಷೆ ಸಲೆ ಸುವಿ ।
ಚಾರ ಸಂಪದದಿಂದೆ ಬೆಳಗುವುದರಿದೆ ಕನ್ನಡಕೆ? ॥
ಮೀರಿ ಬರೆ ಗ್ರಹಚಾರ ಭಾಷೆಯು ।
ನಾರು ಕಾವರು? ನಿಂದು ನೋಳ್ಪೊಡೆ ।
ದೂರು ದೂಷಣೆಯುಳಿದು ಪೋಪವು ತಾವೆ ಬೇಗದಲಿ ॥

ತಾಯ ಭಾಷೆಯು ಮಮತೆ ತೊರೆವ ।
ನ್ಯಾಯವೆಮ್ಮೊಳಗಿಲ್ಲ ಕನ್ನಡ ।
ಸಾಯಲೆನ್ನುವ ನುಡಿಯ ನುಡಿಯೆವು ಹಾಸ್ಯವಾದರೆಯುಂ ॥
ತಾಯ ಹಾಲೆಂತೆಮ್ಮ ಸಲಹಿತೊ ।
ಕಾಯಪುಷ್ಟಿಯೊಳಂತು ಮನಸಿನ ।
ಪ್ರಾಯ ಬಂದುದು ನಮಗರಿಯೆ ಕನ್ನಡದ ನುಡಿಯಿಂದ ॥

---

# ಮನಸು

ಸರಕವೆಂಬರು ಕೇಡಿಸರಮನೆ ।
ಕರುಬಿನಾಲಯ ನೋಡಿಯೆಂಬರು ।
ನರರ ಲೋಕವ ಮರುಗಿ ಬಯ್ವರು ಹಲವು ಮಾನವರು ॥
ಸುರರ ಲೋಕಕೆ ಸಾಟಿಯೆಂಬರು ।
ಕರುಣದಾಲಯ ಸೌಖ್ಯದಾಗರ ।
ಅರಿಯೆ ಸೊಬಗಿನ ಬೀಡಿದೆಂಬರು ಇತರ ಮಾನಿಸರು ॥

ನರಕವಾವುದು ಸ್ವರ್ಗವಾವುದು ।
ಪರಿಪರಿಯ ಕರ್ಮಾನುಸಾರದ ।
ಕುರುಹು. ಬಗೆವೊಡೆ ಮಾಳ್ಕೆಗನುಗುಣ ಬಾಳ್ಕೆ ಲೋಕದೊಳು ॥
ಮರುಕವಾವುದು ಸೌಖ್ಯವಾವುದು ।
ಅರಿಯೆ ಮನಸಿನ ಮನೆಯುಲಲ್ಲದೆ ।
ಸುರರ ಸ್ವರ್ಗವು ನರರ ನರಕವು ಮತ್ತದೆಲ್ಲಿಯುವು ॥

# ಕೃಷಿ

ಮಣ್ಣು ಗೊಬ್ಬರ ಗೋಡು ಗಂಜಲ ।
ನೆಸ್ನು ತೊಂದೊಂದಾಗಿ ನೆನೆಯುತ ।
ಮಣ್ಣಿನೊಳಗಣ ಕೆಲಸ ಕೃಷಿಯೊಳು ಸೊಬಗದೇನೆನುತ ॥
ಮಣ್ಣಿನಿಂದಲೆ ಮನೆಯಿದರಿಯದೆ ।
ಕಣ್ಣು ಮನಗಳಿಗೊಪ್ಪದಂದದ ।
ಬಣ್ಣವಿಲ್ಲದ ಬಾಳ್ಕೆ ಮಾಳ್ಪರೆ ಬಹಳ ಬೇಸರಿಸಿ? ॥

ಹಗಲು ರಾತ್ರಿಗಳರಿಯದಲೆಯುವ ।
ಹೊಗೆಯಗಾಡಿಗಳಂತರಿಕ್ಷಕೆ ।
ಚಿಗಿದು ಪಕ್ಷಿಗಳಂತೆ ಹಾರಾಡುವ ವಿಮಾನಗಳು ॥
ಮಿಗಿಲೆನಿಸಿ ಬಾಳುವುದು ಸಾಧ್ಯವೆ ।
ಬಗೆಯರಿತು ನಡೆಯದಿರೆ ಕೃಷಿಯಾ ।
ನಗಳು ಕಾರ್ಯವೆ ಮಿಗಿಲು ಮನ್ನಣೆ ಬೇರೆಯೆಂದೆನುತ? ॥

ಬೆಳೆದು ಸುಮ್ಮನೆ ಬಾಲರೆಲ್ಲರು ।
ಚೆಲುವು ರೂಪಗಳೊಂದು ಕಾಣದೆ ।
ಕಲೆಯುಮಕ್ಕರನೊಂದನರಿಯದೆ ಜೀವಿಸುತ್ತಿರಲು ॥
ಕಳೆದು ಕಾಲವ ನಡೆದರಾಗದೆ ।
ಚೆಲುವು ಚೆಂದಗಳೇಕೆ ಕಲಿಯುವ ।
ಹಲುಬಿದೇತಕ್ಕೆಂಬುದೆಮ್ಮಯ ಬಣ್ಣವಾಗಿಹುದು ॥

## ಯುಗಾದಿ

ಕಟ್ಟಿ ಮನೆಗಳ ಬಿಟ್ಟುಹೋಹದೆ ।
ಕಟ್ಟಿಕೊಂಡೇ ನಡೆವರಾರಿಹ ।
ರಟ್ಟಹಾಸದ ಮಾಟವೇತಕೆ ಮಣ್ಣಿಗೆಂದೆನುತ ॥
ಮಟ್ಟವಿಲ್ಲದ ನೆಲದ ಮೇಲಿ ।
ಕ್ಕಟ್ಟಿನಲಿ ಮನೆಯೆಂದು ಕರೆಯುತ ।
ಸೊಟ್ಟ ಗೋಡೆಗಳಿಟ್ಟು ಸೋಳ್ಪುದಿದೆಮ್ಮ ಬಾಳುವೆಯು ॥

ಹಲವು ಹೇಳಿದೊಡೇನು ಕೃಷಿಯೊಳು ।
ಗೆಲುವು ತೋರುವುದಧಿಕವದರಿಂ ।
ದಳಿಯಬಾರದು ಕಾರ್ಯ ಮುಂದಿಯ ದೃಷ್ಟಿಯಿಂದೆನುತ ॥
ಹಲವು ಕಣ್ಗಳ ಕೆಟ್ಟ ದೃಷ್ಟಿಯ ।
ಕಳೆಯೆ ಗಳಿಸಿದ ಕ್ರೂರ ರೂಪಿನ ।
ಹಳೆಯ ಗೊಂಬೆಗಳಂತೆ ಸೊಗಸಿಹುವೆಮ್ಮ ಕೆಲಸಗಳು ॥

ಸುಲಭವೋ ಸಾಮಾನ್ಯವೋ ಕೃಷಿ ।
ಗೆಲಸವದರಂದವನು ವಿವರಿಸಿ ।
ತಿಳುಪಲೆಂತಹುದದನು ಬಣ್ಣಿಪರಿಂತು ಮತಿಯುತರು ॥
ಸಲಹಿಕೊಂಬುದು ತಮ್ಮ ತಾವ್ ಸುಖ ।
ದೊಳಗೆ ಹಂಗಿಗರಾಗಿ ಬಾಳದೆ ।
ಸಲಹುವುದು ಸಂಸಾರಗಳ ಸುವಿಚಾರಪರರಾಗಿ ॥

ಬೆಳೆಗಳನು ಹುಲುಸಾಗಿ ಬೆಳೆಯು ।
ತ್ತಳಿಲು ಭಕ್ತಿಯೊಳಾದೊಡಂ ತಾವ್ ।
ಲಲಿತವಹ ವಿಧದೊಳ್ ಸಮಾಜಕೆ ಸೇವೆ ಮಾಡುವುದು ॥
ಬೆಳೆಗೊಡುವ ಭೂಸಾರವನು ತಾ ।
ವ್ಕಳೆಯದುಳಿಸುತ್ತಧಿಕ ಮಾಗಿಯೆ ।
ಗಳಿಸಿಹೋಹುದು ತಮ್ಮ ಸ್ವಾಧೀನತೆಯ ಭೂಮಿಯೊಳು ॥

ಇದುವೆ ಕೃಷಿಕರ ಧರ್ಮವಾಗಿಹು ।
ದಿದರ ಸಾರವ ಬಲ್ಲ ಕೃಷಿಕರೆ ।
ಬದುಕಿ ಬಾಳುವ ದೇಶದೇಳ್ಗೆಗೆ ಮೂಲಕಾರಣರು ॥
ಅಧಿಕವಾಗಿಯೆ ತೋರ್ಪುದಭಿಮತ ।
ವದರ ನೆರವೇರಿಕೆಯ ಮಾರ್ಗದೊ ।
ಳೊದಗಿದೆಡರನು ಬಿಡಿಸುವಂದವೆ ಸಂಘಸಾಧನೆಯು ॥

ಅಂದಿಗಿಂದಿಗು ಒಂದು ಬೆಳೆಯೇ ।
ಬಂದೆಡೆಯೊಳಿಂದೆರಡು ಬೆಳೆ ಬೆಳೆ ।
ವಂದವನು ತೋರುವ ವಿಚಾರವದಾವನೊಳಗಿಹುದೋ ॥
ಸಂದೊಡಾ ಮಂತ್ರಪ್ರವೀಣರ ।
ಸಂದಣಿಗು ಮಿಗಿಲೆನಿಸುತವನಿಂ ।
ಸಂದುದಾಗಿಹುದವನ ಸಲಹಿದ ನಾಡಿಗುಪಕೃತಿಯು ॥

## ಮಸಿ

ಕರಿಯ ಬಣ್ಣದ ನೀರು ಮರೆದರೆ ।
ಹರಿದು ನೆನಸಿದ ಸಕಲ ವಸ್ತುವ ।
ನರಿವೆ ಮೊದಲಾಗೆಲ್ಲವನು ತಾ ಬಣ್ಣಗೆಡಿಸುವುದು ॥
ಉರುಳಿ ಕಾಲುವೆಯಾಗಿ ಬಹುದಂ ।
ತಿರಲಿ ಮಿಾರಿದರೊಂದೆ ಚುಕ್ಕೆಯೊ ।
ಕಿರದೆ ಸಾವಿರದಾರು ಚಿತ್ರವ ನುಂಗಿ ಹೀರುವುದು ॥

ಎಲ್ಲಿ ತಾನಡಗಿದ್ದಿತೋ ಮಸಿ? ।
ಬಲ್ಲವನು ಹಿಡಿತಂದು ತಾನಿದ ।
ನೊಳ್ಳಿದನು ಲೋಕಕ್ಕೆ ಮಾಡಲು ಯತ್ನ ಗೈದವನು ॥
ಸಲ್ಲದೀ ವಸ್ತುವಿಗೆ ಮನ್ನಣೆ ।
ಒಳ್ಳಿತೆಂಬುದು ಸುಳ್ಳದೆಂಬೊಡೆ ।
ಬಲ್ಲರುಂಟೇ ದೃಷ್ಟಿಭೇದದ ವಿಷಮ ಸಮತೆಗಳಾ? ॥

ಕುಡಿಕೆಗಳೊಳಿಡಲೆಚ್ಚರಂಚೇ ।
ಕೊಡೆಯದಂದದೆ ಸಲಹಿಕೊಂಬೊಡೆ ।
ಪಡೆಯೆ ಮಿತವಿನಿಯೋಗದಲಿ ತಾನುಂಟು ಪ್ರತಿಕೃತಿಯು ॥
ಕೊಡಿಸುವುದು ಬಾಲರಿಗೆ ಮೆಚ್ಚನು ।
ಸಡಸುವುದು ಕೈಗಳನು ಕಾಣಿಕೆ ।
ಗೊಡಿಸುವುದು ತನ್ನಯ ಹೆಸರಿನಲಿ ಸ್ವಾನುಭವಿಕರಿಗೆ ॥

## ಮಸಿ

ಜಾತರಿಗೆ ತಾ ಸಕಲ ಕರ್ಮದ ।
ರೀತಿ ನೀತಿಯ ತೋರುತಿರುವುದು ।
ಜಾತಕಂಗಳ ಬರೆದುಕೊಡುವುದು ಹುಟ್ಟಿನೆಣಿಕೆಯಲಿ ॥
ಮಾತುಕಥೆಗಳ ಬಳಸಿ ಬೆಳಸುತ ।
ಪ್ರಾತಿಸಿಧ್ಯವ ವಹಿಸಿ ಮಿಗೆ ನೇ ।
ಮಾತಿಶಯದಲಿ ಬಾಳ ಬೇಡಿಕೆಗಳನು ಸಲಿಸುವುದು ॥

ಪ್ರೀತಿಯನು ಬಿತ್ತುವುದು ಪ್ರೇಮದ ।
ದೂತನಾಗಿಯೆ ದುಡಿದು ಬಹು ಸಂ ।
ಪ್ರೀತಿಯಲಿ ನಂಟುಗಳ ಮಧ್ಯಸ್ತಿಕೆಯ ಮಾಡುವುದು ॥
ಮಾತು ಹೊಂದಲು ಲಗ್ನ ಕೂಟವ ।
ತಾ ತಿಳುಹುವುದು. ಕರೆಯ ಬರಹದ ।
ಸೂತರವ ತಾನೇ ವಹಿಸಿ ಮದುವೆಗಳ ಸಾರುವುದು ॥

ಕರಣಿಕರ ಕುಲದೈವ ವಿದ್ಯೆಯ ।
ಸರಸುತಿಹ ಸಾಧಕರ ಸಾಧನ ।
ವಿರಹಿಗಳ ತಲ್ಲಣವ ಸಂತಯಿಸುತಿಹ ಮಾಂತ್ರಿಕವು ॥
ಬರಹಗಾರರ ಕೈಯಿ ಮುದ್ರಾ ।
ಕ್ಷರದ ಸೊಗಸಿನ ಮೈಯಿ ಹಾಸ್ಯದ ।
ತೆರನ ಬಲ್ಲರ ಮುಯ್ಯಿ ಜ್ಞಾನದ ರೂಪು ಮಸಿಯರಿಯೇ ॥

ಕತ್ತಲೆಯ ತದ್ರೂಪು ಚೆಲುವನು ।
ಮುತ್ತಿ ನುಂಗುವ ರಾಹುಕೇತುವು ।
ಮತ್ತೆ ಮಲಿನದ ಸಾರವದು ಶುದ್ಧತೆಯ ಪ್ರತಿಕಕ್ಷೀ ॥
ಎತ್ತಿಕಟ್ಟಿದ ಚೌರ್ಯ, ನೋಡಲು ।
ಬತ್ತಿಯೊಣಗಿದ ಶೌರ್ಯ, ಭಾವಿಸೆ ।
ಮತ್ತೆ ಸುಳಿವುದು ಪಾಕವಿಳಿಸಿದ ಕ್ರೌರ್ಯ ಮಸಿಯೊಳಗೇ ॥

ಪಕ್ಷವೆರಡೀ ಲೋಕದೊಳಗಾ ।
ಪಕ್ಷದವರಾಡಿಕೊಳಲೇನೈ ।
ಸಾಕ್ಷಿಯಿಹುದೈ ಮುಸಿಯೆ ನಿನ್ನಯ ಗುಣದ ಮೆಚ್ಚಿಗೆಗೆ ॥
ಅಕ್ಷಯಾತ್ಮನೆ ಗುರುವು ಮೋಕ್ಷ ಫಾ ।
ಲಾಕ್ಷ ಕಳುಹಿದ ಗಂಗೆ ನೀನೈ ।
ಶಿಕ್ಷೆ ರಕ್ಷೆಯ ಸತ್ವ ನಿನ್ನೊಳಗಿಹುದು ಹೆದರದಿರು ॥

ಆರು ಜ್ಞಾನವ ಹರಡಿ ಬೀರುವ ।
ರಾರು ನೀತಿಯ ಕಟ್ಟಿ ನಡಸುವ ।
ರಾರು ಮಾನವ ಕುಲದ ರಕ್ಷಣೆಗಾಗಿ ನಿಂದವರು ? ॥
ಆರು ಧರ್ಮವ ಸಾರಿ ಹೇಳುವ ।
ರಾರು ರಾಜ್ಯಗಳೆಲ್ಲನುಳುಹುವ ।
ರಾರು ದೇವನ ಹಿರಿಯ ಸೇವಕರೆನಲು, ಮುಸಿಯೆಂಬೇ ॥

---

## ಚೆನ್ನಕೇಶವ—ಗೋಮಟೇಶ್ವರ

ಅಲ್ಲಿ ನೀನೇ ಚೆನ್ನಕೇಶವ ।
ನಿಲ್ಲಿ ನೀನೇ ಗೋಮಟೇಶ್ವರ ।
ನಿಲ್ಲಿನಾ ವೈರಾಗ್ಯವೇನಿದು ಅಲ್ಲಿ ಸಂಸಾರ? ॥
ಎಲ್ಲಿಯೂ ನೀನಾಗಿ ಕೆಲಬರಿ !
ಗಿಲ್ಲಿ ತೋರಿದೆಯಿಂತು ಕೆಲಬರಿ ।
ಗಲ್ಲಿ ತೋರಿದೆಯೊಂದು ಪರಿ ಪೇಳೇತಕ್ಕೈ ದೇವ? ॥

ಏನು ಸೊಬಗಿನ ಗುಡಿಯ ಕಟ್ಟಿಹ ।
ರಾನೆ ಕುದುರೆಯು ದಾಳಿ ಸಾಲ್ಗಳ ।
ಸೇನು ಕ್ರಮದಲಿ ನಡೆವ ಸೈನ್ಯದವೋಲು ಕೆತ್ತಿಹರು! ॥
ಏನು ರಾಮಾಯಣವು ಭಾರತ ।
ವೇನು ಚಿತ್ರಿಸಿ ಬರೆದು ತೋರಿಹ ।
ರೇನು ಮತ್ತೆ ಪುರಾಣ ಪುಣ್ಯದ ಹಲವು ಕಥೆಗಳನು! ॥

ದೇವತಾ ಪರಿವಾರವೇನದು ।
ಹಾವಭಾವಗಳಿಂದೆ ಸೊಗಯಿಸು ।
ವಾ ವನಿತೆಯರ ಗಾನನಾಟ್ಯಗಳೇನು ಬಳಿಯೊಳಗೆ? ॥
ಭಾವಿಸಲು ಬರಿಗೊಂಬೆಗಳೆ? ತಾ ।
ವಾವಗಂ ಮಧುರತರ ಗಾನದೆ ।
ಸೇವೆ ನಿನಗರ್ಪಿಸುವ ಜೀವವೆ ಯೆಂಬವೋಲಿಹವೂ ॥

ಚೆಂದದಿಂದಾನಂದಮೂರ್ತಿಯ ।
ನಂದದಾಲಯದೊಳಗೆ ವಿವಿಧಾ ।
ನಂದದಿಂದಂ ನಿಲಿಸಿ ಪೂಜಿಸೆವೆಂಬ ಭಕ್ತರಿಗೆ ॥
ತಂದೆ ನೀನಿರ್ದುಮವರಾ ನಿ ।
ರ್ಬಂಧದಲಿ ಸಂಸಾರ ನಿನ್ನನು ।
ಬಂಧಿಸಿಲ್ಲೆಂಬುದನು ತೋರುವೆಯೇನೊ ಮಾರಮಣ ! ॥

ಇಲ್ಲಿ ನಿನ್ನನು ಬೆಟ್ಟದಾತಲೆ ।
ಯಲ್ಲಿ ಬೆತ್ತಲೆಯಾಗಿ ಬಯಲಲಿ ।
ನಿಲ್ಲಿಸಿಹರೇಕಯ್ಯ ? ಚಿಂತೇನೊರೆಯುತಿಹೆ ಪೇಳು ॥
ಎಲ್ಲ ಲೋಕಕೆ ಕೊಟ್ಟೆ ಕೊಟ್ಟಾ ।
ವೆಲ್ಲಸವೆ ಲೋಕವನು ಕಾಯಲಿ ।
ಕೊಳ್ಳೆ ನೆರವಾಯ್ತೆಂಬ ತತ್ವವ ಸಾರುತಿಹೆಯೇನೊ ! ॥

# ಸತ್ಯನಾರಾಯಣ

ಹಿರಿಯ ಮರಗಳು ಹಿಂದೆ ಬೆಳದಿಹ ।
ಮರಗಳನು ಬಳ್ಳಿಗಳು ಸುತ್ತಿವೆ ।
ಅರಿಯೆ ಘೋರಾರಣ್ಯ ದೇಶವಿದೆಂದು ತೋರುತಿದೆ ॥
ಹರಡಿದೀ ಕಾಡಿನೊಳು ಬೆಳಗಿದೆ ।
ಪರಿಪರಿಯ ಹೂಗಿಡಗಳಿಂದಲಿ ।
ಪರಮ ಪೂಜ್ಯರದೊಂದು ಪೂಜಾಸ್ಥಾನಮಿರಿದಾಗಿ ॥

ಆರಿವರು? ಮುನಿವರರು ಕಾಣಿರೆ ।
ನಾರದರು, ಕರದೊಳಿಹ ವೀಣೆಯೆ ।
ಸಾರುತಿದೆ ಹರಿಕಥನಗಾನಾಸಕ್ತರೆಂಬುದನು ॥
ಆರು ಬಲ್ಲರು ಲೋಕಗಳ ಸಂ ।
ಚಾರವನು ಬಿಟ್ಟಿಲ್ಲಿ ಕುಳಿತ ವಿ ।
ಚಾರವನು? ಯಿದೆ ಮಾತ್ರ ಪೂಜಾವಸ್ತು ಸಂಗ್ರಹವೂ ॥

ಗಂಧ ಪುಷ್ಪಾದಿಗಳ ಪರಮಾ ।
ನಂದದಿಂದಂ ದೇವಗರ್ಪಿಸ ।
ಲೆಂದು ಹಣ್ಣಾಯಿಗಳ ತಾಂಬೂಲಗಳನಳವಡಿಸಿ ॥
ಒಂದು ರಾಗವ ನುಡಿಸಿ ಕರೆದರೆ ।
ಬಂದು ನಾರಾಯಣನು ಯೆದುರಿಗೆ ।
ನಿಂದು ಸ್ವೀಕರಿಸುವನು ಯೆಂದಾಲಾಪನೆಯ ಮಾಡೆ ॥

ತನಗೆಯೆಂದೇ ಇಟ್ಟ ಪೀಠದೊ ।
ಳನಿತರೊಳಿಗೆ ಹರಿ ಸಿಲ್ಲಲಾ ಹೊಳ ।
ವಿಸಲಿ ಕತ್ತಲೆ ಕಾಡನೆಲ್ಲವ ಬಿಟ್ಟು ಸರಿದಿರಲೂ ॥
ತನುವ ಮರೆದತಿ ಭರದೆ ತಮ್ಮಾ ।
ಸನವ ಬಿಟ್ಟೆದ್ದು ಮುನಿ ವೀಣೆಯು ।
ನು ನುಡಿಸದೆ ಹರಿ ಮೊಗವ ನೋಡುತ ನಿಂದರೆಂಬುದನು ॥

ಬೆರಗುವಡೆದಾ ಮುನಿಪ ನಂದವ ।
ಹರಿ ಭರದಿ ಭಕ್ತರೆಡೆ ಬರುವುದ ।
ಹರಿದು ಕತ್ತಲೆ ಜ್ಞಾನಜ್ಯೋತಿಯು ಹರಡುವಂದವನು ॥
ಬೆರೆದು ಪ್ರಕೃತಿಯೊಡನೆ ಮುನಿವರ ।
ರಿರವು ಸೊಗಸಿಗುವೆಂಬ ತತ್ವವ ।
ನೊರೆವ ಚಿತ್ರವನೆಂತು ಬಣ್ಣಿಸಲಹುದು ನುಡಿಗಳಲೀ? ॥

# ನವಯುಗ

ಉಳಿದು ಬಾಳದ ಕಾಲ ಪರಿಯದು ।
ಅಳಿದು ಪೋಗಿರಲದರ ಸೊಬಗಸು ।
ಕಳೆದುಕೊಂಡಾ ಮಾನವರು ಬಿಸುಸುಯ್ದು ಬಳಲಿರಲೂ ॥
ಹಳೆಯ ನೆನಹಿನ ಶೋಕವೇತಕೆ ।
ಕಳೆ ವಿನೂತನ ಪಥದೊಳುಂಟೆಂ ।
ಬೊಲುಮೆಯಸು ತೋರುತಿಹುವಾ ನವಯುಗದ ಕುರುಹುಗಳು ॥

ಬರೆ ವಸಂತಸು ಕೋಕಿಲಂಗಳು ।
ಸ್ವರದ ಸುಣ್ಪಂ ಪಾಡುತಿಹವೊಲು ।
ಕರೆದೊರೆದು ಸಾರುತಿಹ ಮಹಸೀಯರ್ಕಳೀ ಯುಗದೆ ॥
ಅರಿಯೆ ನವಯುಗದುದಯಮಂ ಪರಿ ।
ಪರಿಯ ತೆರದಿಂ ಸೂಚಿಸುತ್ತಿಹ ।
ಕುರುಹುಗಳು ತಾವೆಂಬವೊಲು ಪ್ರಖ್ಯಾತರಾಗಿಹರು ॥

ಬೇಡಿ ಕಾಡುವ ಕಾಲವಳಿದುದು ।
ನೋಡಿ ನಿಲ್ಲುವ ಸಮಯ ಮರೆಯಾ ।
ಯ್ತಾಡಿಪಾಡಿಯು ಮಾಡಿನೋಡದ ಕಾಲಮಿರದಾಯ್ತು ॥
ಬಾಡಿ ಬಳಲಿದೊಡಿದುವೆ ನಮ್ಮಯ ।
ಪಾಡು ಮಾಡುವುದೇನು ಬರಿದೆಂ ।
ದಾಡಿ ಕೂಡುವ ಗುಣಕೆ ತಾನೆಡೆಗೊಡದು ನವಯುಗವು ॥

ಹಿರಿಯ ಪೂರ್ವದ ಜ್ಞಾನವೊಂದೆಡೆ ।
ಸಿರಿಯ ರೂಪಿನ ಪಾಶ್ಚಿಮಾತ್ಯರ ।
ಪರಿಯ ವರ ವಿಜ್ಞಾನವೊಂದೆಡೆ ಬೇರೆಯಾಗಿರದೆ ॥
ಕರಗಳಂ ಪಿಡಿದೊಟ್ಟುಗೂಡಿರೆ ।
ಧರೆಯೊಳೇಕದ ಭಾವಮಂಕುರಿ ।
ಸಿರಲು ವಂದನೆಯು ಶುಭಮಂ ತೋರುತಿಹ ನವಯುಗಕೆ ॥

---

# ಕಣಿವೆ – ಕೆರೆ

ಅಡಿಯೊಳೋಡಾಡುತಿರೆ ಲೋಕದ ।
ಗಡಿಯು ತಾನೆಂಬಂತೆ ತೋರುವ ।
ದಡವಿ ಮಧ್ಯದ ಕಣಿವೆಯಾಗಿಹ ಬೀಡು ತಾನೊಂದು ॥
ಕಡಿದೆನಿಪ ಬೆಟ್ಟವನು ಬೇಸರ ।
ಪಡದೆ ತಾನೇರಿದೊಡೆ ಸುತ್ತಲು ।
ನೊಡೆದು ಕಾಣ್ಬುವು ಮಿಗಿಲೆನಿಪ ಲೋಕಗಳು ತಾವಾಗಿ ॥

ಕತ್ತಲೆಯ ಮಬ್ಬಿನಲಿ ಕೆರೆಯೊಂ ।
ದತ್ತಣಾದಡ ಮರೆಯೊಳಡಗಿಹ ।
ಬಿತ್ತರದ ಕಡಲೆಂಬ ಪರಿಯೊಳು ಹರಡಿ ತೋರುವುದು ॥
ಮುತ್ತಿದಾ ಕತ್ತಲೆಯು ಹರಿಯಲು ।
ಮತ್ತೆ ತಾನೆಂದಿನೊಲು ಕಿರಿದೆನಿ ।
ಸುತ್ತೆ ಕಾಣ್ಬುದು ಒತ್ತಿದಾ ಕೆರೆ ಬಯಲು ಬಯಲಾಗಿ ॥

# ಕರುಣ

ಪರರ ದೆಸೆಯಿಂ ತೋರ್ಪುದಲ್ಲಾ ।
ಬರಿಯ ಬಿಂಕದ ಕಾರ್ಯವಲ್ಲಾ ।
ಕರುಣವೆಂಬುದು ಕಟ್ಟುಸಿಟ್ಟಿನ ಮಾತು ತಾನಲ್ಲ ॥
ಸುರರ ನಾಡಿಂ ಕಾಲಕಾಲಕೆ ।
ನರರ ನೆಲದಾ ದಣುವನಾರಿಸೆ ।
ಬರುವ ವೃಷ್ಟಿಯುವೋಲು ಕರೆದಡೆ ಕರುಣೆ ಸೊಗಯಿಪುದು ॥

ಪುಣ್ಯದೇಳಿಗೆಯಹುದು ಕರುಣದಿ ।
ಧನ್ಯನಾದಪನೀವದಾತನು ।
ಧನ್ಯಸಹನಾ ಮನುಜನಾವಂಗದುವೆ ಸೇರುವುದೋ ॥
ಗಣ್ಯವಾಗಿಹ ಗುಣವು ತಾನ ।
ನ್ಯೋನ್ಯ ಸ್ನೇಹಕೆ ಮಾರ್ಗವೆನಿಸುತ ।
ಮಾನ್ಯವಾಗಿಹುದಖಿಳ ವಿಧದಿಂ ಕರುಣೆ ತಿಳಿಯುವುದು ॥

ಅರಸುತನದಾ ಖಡ್ಗಕಿಲ್ಲದ ।
ಹಿರಿಯ ಸಾಹಸ ಕರುಣೆಗಿಹುದೈ ।
ಅರಸಗೊಪ್ಪುಗು ಕರುಣೆ ಮುಕುಟದ ಮಣಿಗೆ ಮಿಗಿಲಾಗಿ ॥
ಹರಿ ಹಿರಿಯನಾಗಿಹನು ತಾನೀ ।
ಕರುಣ ಸಾಗರನೆಂಬ ಬಿರುದಿಂ ।
ಕರುಣವೇ ವಿಜಯಕ್ಕೆ ಪಾವನ ಮಾರ್ಗವಾಗಿಹುದು ॥

(ಷೇಕ್ಸ್‌ಪಿಯರ್ ಕವಿಯ ಕ್ವಾಲಿಟಿ ಆಫ್ ಮರ್ಸಿಯನ್ನು ನೆನೆದು ಬರೆದುದು)

# ಚಿತ್ರಗಾರ

ಇನ್ನುಮಿವೆ ತಾರೆಗಳು ಚಂದಿರ ।
ನಿನ್ನು ತನ್ನಾಳಿಕೆಯು ಸುಳಿದಿ ।
ಲ್ಲಿನ್ನು ತಡೆದರೆ ಸಿಗದು ಪೂರ್ವಾಚಲದ ಸೊಬಗೆಂದು ॥
ತಣ್ಣನೆಯ ಮಾರುತಕೆ ಮೆಯ್ಬ ।
ಟ್ಟುನ್ನತದ ಗಿರಿಯೇರುತಲ್ಲಿಯೆ ।
ಕಣ್ಣುಗಳ ಸೆವೆಯಿಕ್ಕದತ್ಯಾತುರದೆ ಕುಳಿತಿರಲೂ ॥

ಗಳಿಗೆಗಳಿಗೆಗೆ ಬೇರೆ ರೂಪವ ।
ತಳೆದು ಸೊಗಯಿಪ ಸೂರ್ಯನುದಯದ ।
ಬೆಳಗಿ ತೊಳಗುವ ಸ್ಥಾನಮೆಸೆದುದು ಬೆರಗನಾಗಿಸುತ ॥
ಬೆಳೆಯುತಿದೆ ಯುರಿಗೆಂಪು ನೋಡರೆ ।
ಗಳಿಗೆಯೊಳೆ ತುಂಬುತಿದೆ ಹೊನ್ನಿನ ।
ಹೊಳಪು ಚಿತ್ರವು ಚಿತ್ರಗಾರನ ವರ್ಣಸಂಗ್ರಹವೂ ॥

ಇನನ ಉದಯದ ಕಾಲವಾಗಿದೆ ।
ಇನಿತು ಸೊಬಗಿನ ಚಿತ್ರ ಬರೆವಾ ।
ವನಿಹನಲ್ಲಿಯು ಗಿರಿಯ ಮರೆಯೊಳು ಹಿರಿಯ ತಾಂತ್ರಿಕನು ? ॥
ಕ್ಷಣಕ್ಷಣಕೆ ಮಿಗಿಲಾಗಿ ಬರುತಿವೆ ।
ದಣುವನರಿಯದ ಚಿತ್ರಗಾರನ ।
ಎಣಿಕೆಗೀಡಾಗದಿಹ ಬಣ್ಣದ ನೋಟ ಮಾಟಗಳು ॥

## ಚಿತ್ರಗಾರ

ಸಂತಸದೊಳದ್ಭುತದ ಚಿತ್ರವ ।
ಸಂತವಾಗಿಯೆ ರಚಿಪ ನಿನಗಿ ।
ನ್ನೆಂತು ವಶವಾಗಿಹವು ಮಂತ್ರಗಳೆನಿತು? ತಿಳುಹೆಲವೋ ॥
ಇಂತು ಬಣ್ಣವ ಬರೆವ ಚದುರನೆ ।
ಅಂತು ಮರೆಯೊಳಗೆಲ್ಲಿ ಸಿಂದಿಹೆ ।
ಎಂತು ಕ್ಷಣಕೊಂದೊಂದು ಚಿತ್ರವ ಬರೆವೆ ಪೆರ್ಮೆಯಲಿ? ॥

ನುಡಿದನಾ ಕ್ಷಣ ಚಿತ್ರಗಾರನು ।
ಎಡೆಬಿಡದೆ ನಿನ್ನಂತರಂಗದ ।
ಗುಡಿಯೊಳಿರುತಿರೆ ನಾನು ಸನ್ನನೆ ಮರತೆ ಚಿತ್ರವಲಾ ॥
ಅಡವಿಯೆಡೆಯೊಳು ಗಿರಿಯ ಮರೆಯೊಳು ।
ಅಡಗಿ ಬರೆದಿಹುದಲ್ಲ ಚಿತ್ರವು ।
ಬಿಡದೆ ನೋಡೈ ನಿನ್ನ ಮನದೊಳೆ ಚಿತ್ರ ಸಂಗ್ರಹವ ॥

---

# ಕನ್ನಡ ನಾಡಿನ ಸೊಬಗು

ಕನ್ನಡ ನಾಡಿನ ಸೊಬಗನದೇ ಬಣ್ಣಿಪೆವೈ! ।
ಕನ್ನಡ ನಾಡಿನ ಸವಿಯನದೇ ನೊರದಪೆವೈ! ॥ ಪ ॥

ಗಿರಿ ಶ್ರೇಣಿಗಳೆಸೆದಿವೆ ರಮಣೀಯಾಕೃತಿಯಿಂ ।
ಬೆರೆದು ವಿಶಾಲ ವಸಂಗಳ ಸಮಲಂಕೃತಿಯಿಂ ॥
ಸೊಂಪಿನ ಸಂತೆಯೊಳೀಪರಿ ಜಡರಾಶಿಗಳುಂ ।
ಇಂಪೆನಿಸಿರೆ ಜೀವದ ಕಳೆ ಪೇಳ್ವುದೆ ಮಗುಳುಂ ॥

ಪರಿಕಿಸೆ ಕೋಪವ ತಾಳ್ದೊಂದೆಡೆ ತಾಂ ಜಗವಂ ।
ಹರಿಸಿ ವಿಷಾದವ ಕುಡುತಿಹಳೊಂದೆಡೆ ಸೊಗವಂ ॥
ಪ್ರಕೃತಿಯ ದಾಸವ ಗ್ರಹಿಸಲ್ ಯೆಚ್ಚರದಿನಿರಲ್ ।
ಸುಕೃತಿಯನೆಸೆವ ಜಸಂ ತವೆ ಮುದಮೇರಿ ಬರಲ್ ॥

ಪಿರಿಯರ್ ಪಿರಿದುಂ ಸಾಹಸ ಮತಿಗಳೆ ತಿಳಿಯಲ್ ।
ಗಿರಿಗಳ ಘೋರಾಟವಿಗಳ ಜಯಿಸಿದರರಿಯಲ್ ॥
ಪುಲಿ ಕರಡಿಗಳಿಕ್ಕೆಯೊಳವರ ಸುವಾಣಿಗಳುಂ ।
ಸಲಿವಂದದೊಳವರವರೆಸಿಸಲ್ ನಾವುಗಳುಂ ॥

# ಹುಟ್ಟಿದ ನಾಡಿನ ನೆನಹು

ನನ್ನದು ನಾಡಿದು ನನ್ನದು ।
ಎನ್ನದೆ ತಾನೊಮ್ಮೆಯಾದೊಡೆಣಿಸದೆ ಮನದೊಳ್ ॥
ಇನ್ನು ಮುಸಿರ್ವಿಡಿದಿಹನಾರ್ ।
ತನ್ನಯ ಸ್ವಸ್ಥಳವ ತಾನೆ ಮರೆದೀ ಜಗದೊಳ್ ? ॥

ಪರನಾಡಿನೊಳಲೆದಲೆದುಂ ।
ಬರಲು ನಿಜಾಲಯಕದೆಂತು ತನ್ನಯ ಮನದೊಳ್ ॥
ಹರುಷದೆ ನಲಿಯದೆ ಮನುಜಂ ।
ಮೊರೆಯುವ ಹೃದಯಾನುರಾಗಮಂ ತೋರೆದಿರ್ಪಂ? ॥

ಎಣಿಸಲ್ಕಂತಹವಂ ಧಾ ।
ರುಣಿಯೊಳಗಿರ್ದೊಡೆ ಪಿಚಕ್ಷಣೆಯೊಳೀಕ್ಷಿಪುದೈ ॥
ಎನಿತೆಸಿತಾದೊಡಮಾತನ ।
ಗುಣವರ್ಣಿತವಾಗದೆಂದು ಕವಿ ಗಾಯಕರಿಂ ॥

ಬಿರುದಾವಳಿಯೆನಿತಿರಲುಂ ।
ಗುರುಘನತೆಯ ಪೆಸರದಿರ್ದುಮೇನುಪಯುಕ್ತಂ? ॥
ಪರಿಮಿತಿಯಿಲ್ಲದ ಸಿರಿತನ ।
ಮಿರಲುಂ ಸಿದ್ಧಿಪುದದೇನು ಮಮತೆಯನುಳಿಯಲ್ ? ॥

ಬಿರಿಯುವ ಬಿರುದಧಿಕಾರದ ।
ಹೊರೆ ಮೆರೆಯುವ ಸಿರಿಗಳೆಂತು ತಾವ್ವೆರ್ಚಿದೊಡಂ ॥
ದುರವಸ್ಥೆಯ ಕಣಿ ಸ್ವಾರ್ಥದೊ ।
ಳುರೆ ಬೆಂದು ಸಜೀವನುಕ್ಕು ತಾಂ ನಿರ್ನಾಮಮುಂ ॥

ಸುಳಿವಿಲ್ಲದೆ ಮಣ್ಣಿಗೆ ತಾ ।
ನಿಳಿವುದು ಮಣ್ಣಿನ ಶರೀರ ಕಳುಹುವರಿಲ್ಲಂ ॥
ತಿಳಿಯಲವಂಗಿಬ್ಬಗೆಯುಳಿ ।
ವಳಿದೊಡೆ ಗುಣಿ ಪೋದನೆಂದು ದುಃಖಿಸರಾರುಂ ॥ —ಸ್ಕಾಟ್

# ಸರಸ್ವತಿಯ ಒಂದು ಚಿತ್ರ

ನೀಲಿ ಗಗನದಿ ಸುಳಿವ ಹಾರು ಮೋಡಗಳೆಲ್ಲ
ವಿಶ್ವಭರಿತನ ದಿವ್ಯ ಗಾನಗಳ ತಂದಿತ್ತು
ವೀಣೆಯಾ ಎಳೆಗಳಲಿ ಹರಿಸುತಿಹವು.
ವನದ ಮರದೆಲೆಗಳನು ಅಲುಗಿಸುವ ತಂಗಾಳಿ
ಮೆಲುನುಡಿಯ ಸುಳಿಸುಳಿವ ಗಾನದಿಂಪನು ತಂದು
ವೀಣೆಯಾ ದನಿಯಾಗಿ ನುಡಿಸುತಿಹುದು.

ಬಿದ್ದೆದ್ದು ಮಡುವಾಗಿ ತೊರೆಯಾಗಿ ಹರಿವ ಹೊಳೆ
ಕಲ್ಲುಗಳ ಮಾತನಾಡಿಸಿ ತಂದ ಕಥೆಯುದೊಂ
ದನು ನಿಂತು ಆ ವೀಣೆಗುಸುರುತಿಹುದು.
ನೀರಿಸಲಿ ನೆಲದಲ್ಲಿ ಬೆಳೆದೆದ್ದ ಎಲೆ ಹೂವು
ತಮಗೆ ಚೇತನವಿತ್ತ ವಿಶ್ವಶಕ್ತಿಯ ಚರಿತೆ
ಆ ವೀಣೆಯಿಂ ನುಡಿಸಿ ಕೇಳುತಿಹುವು.

ವಿಶ್ವಶಿಲ್ಪಿಯ ಕೃತಿಯ ಕೈಯ ಓಲೆಯು ತಾನು
ಮೌನದಲಿ ತೋರುತಿರೆ ಜಪದ ಮಣಿ ಯದನೆಣಿಸಿ
ಜಾಣೆ ವೀಣೆಗೆ ನುಡಿಯ ಕಲಿಸುತಿಹುದು.
ಅರೆಗಳಿಗೆ ಆಡೆಂದು ಬಿಟ್ಟ ನವಿಲೂ ತಾನು
ಬಿಟ್ಟಿರಲು ಬಾರದಲೆ ನುಡಿಗೇಳೆ ತಿರುಗಿಹುದು,
ವಾಣಿಯಾನಂದರಸ ಬೀರುತಿಹಳು.

---

1397—36.—ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯುರವರು ಮುದ್ರಿಸಿರುವರು.

THE
BANGALORE
PRESS
LAKE VIEW
MYSORE RD
BANGALORE
CITY